ದಿನಾಂಕಃ **06.09.2025** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಪಾಟೀ ಸವಾಲು : ವಾದಿಯ ಪರ ವಕೀಲರಿಂದಃ

01. ನಾನು 9 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನಗೆ ಕನ್ನಡದಲ್ಲಿ ಓದಲು ಬರೆಯಲು ಬರುತ್ತದೆ ಎಂದರೆ ಸರಿ. ನನ್ನ ತಂದೆ ಎಂ.ಪಿ.ಎಂ. ಚಂದ್ರಯ್ಯನವರು ಯಾವಾಗ ತೀರಿಕೊಂಡರು? ಎಂದರೆ ನನಗೆ ನೆನಪಿಲ್ಲ. ಅವರು ತೀರಿಕೊಂಡು 10-12 ವರ್ಷ ಕಳೆದಿದೆ. ನನ್ನ ತಂದೆಯವರಿಗೆ 1 ರಿಂದ 3 ನೇ ಪ್ರತಿವಾದಿಗಳು ಮತ್ತು ಮೃತ ವೀರೇಶ ವಾರಸುದಾರರು ಎಂದರೆ ಸರಿ. ನನ್ನ ತಂದೆಯವರು ಬದುಕಿದ್ದಾಗಲೇ ಅವರ 3 ಜನ ಮಕ್ಕಳ ಮದುವೆಗಳನ್ನು ಮಾಡಿದ್ದರು ಎಂದರೆ ಸರಿ. ನನ್ನ ತಾಯಿ ಗೃಹಿಣಿಯಾಗಿದ್ದರು ಎಂದರೆ ಸರಿ. ನನ್ನ ಅಣ್ಣನ ಹೆಂಡತಿ ಮತ್ತು ಮಕ್ಕಳಾದ ವಾದಿಗಳು ಯಾವ ಪರಿಹಾರಕ್ಕಾಗಿ ದಾವೆ ಹಾಕಿದ್ದಾರೆ? ಎಂದರೆ ನನ್ನ ತಂದೆಯ ಆಸ್ತಿಗಳಲ್ಲಿ ನನ್ನ ಅಣ್ಣನಿಗೆ ಬರಬೇಕಾದ ಪಾಲು ಕೊಡಬೇಕೆಂದು ಕೇಳಿ ದಾವೆ ಹಾಕಿದ್ದಾರೆ. ಎಲ್ಲಾ ದಾವಾ ಸ್ವತ್ತುಗಳು ನನ್ನ ತಂದೆಯ ಆಸ್ತಿಗಳಾಗಿದ್ದವು ಎಂದರೆ ಸಾಕ್ಷಿಯು ಸರ್ವೇ ನಂ. 289 ಮತ್ತು ಸರ್ವೇ ನಂ. 280 ಮಾತ್ರ ನನ್ನ ತಂದೆಯ ಆಸ್ತಿಗಳು, ಉಳಿದ ಆಸ್ತಿಗಳು ನನ್ನ ತಾಯಿಗೆ ಆಕೆಯ ತವರುಮನೆಯವರಿಂದ ಬಂದಿದ್ದವು ಎಂದು ಹೇಳಿದ್ದಾರೆ. ಉಳಿದ ಆಸ್ತಿಗಳನ್ನು ನನ್ನ ತಾಯಿಯ ತವರುಮನೆಯಿಂದ ಕೊಟ್ಟಿರುತ್ತಾರೆ ಎಂಬ ಬಗ್ಗೆ ಯಾವ ದಾಖಲೆಗಳನ್ನು ಹಾಜರು ಮಾಡಿದ್ದೇನೆ? ಎಂದು ಕೇಳಿದರೆ ಸಾಕ್ಷಿಗೆ ಆ ದಾಖಲೆಗಳ ಹೆಸರು ಹೇಳಲು ಸಾಧ್ಯವಾಗಿಲ್ಲ. ಜನತಾ ಮನೆ ಕೊಟ್ಟಿದ್ದಾರೆ, ಉಳಿದ ದಾಖಲೆಗಳನ್ನು ಹಾಜರು ಮಾಡಿದ್ದೇನೆ ಎಂದು ಮಾತ್ರ ಉತ್ತರಿಸಿದ್ದಾರೆ. ಜನತಾ ಮನೆ ಮಂಜೂರು ಮಾಡಿದಾಗ ಸರ್ಕಾರಿ ಆದೇಶ ಮಾಡುತ್ತಾರೆ ಎಂದರೆ ಆ ದಾಖಲೆ ಎಲ್ಲೋ ಕಳೆದು ಹೋಗಿರಬಹುದು. ಪ್ರತಿವಾದ ಪತ್ರದಲ್ಲಿ ಜನತಾ ಮನೆ ಮಂಜೂರಾತಿ ಆದೇಶ ಎಲ್ಲೋ ಕಳೆದು ಹೋಗಿದೆ ಎಂದು ಬರೆಯಿಸಿದ್ದೀರಾ ? ಎಂದರೆ ಬರೆಯಿಸಿರಬಹುದು, ನೆನಪಿಲ್ಲ. ಜನತಾ ಮನೆ ಮಂಜೂರು ಮಾಡಿದ್ದರು ಮತ್ತು ಅದರ ಆದೇಶ ಕಳೆದು ಹೋಗಿದೆ ಎಂದು ಸೃಷ್ಟಿಸಿಕೊಂಡು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

02. ಸಾಕ್ಷಿಗೆ ಐಟಂ ನಂ. 3 ರ ಪಹಣಿಯನ್ನು ಕೈಗೆ ಕೊಟ್ಟು ಇದರಲ್ಲಿ ಯಾರ ಯಾರ ಹೆಸರುಗಳು ನಮೂದಾಗಿವೆ ಓದಿ ಎಂದು ಕೇಳಿದ್ದಾರೆ. ಸಾಕ್ಷಿಯು ಪಹಣಿಯನ್ನು ಓದಿ ಇದರಲ್ಲಿ ನನ್ನ ದೊಡ್ಡಪ್ಪ ರುದ್ರಮುನಿ, ಇನ್ನೊಬ್ಬ ದೊಡ್ಡಪ್ಪ ರೇವಣಸಿದ್ಧಯ್ಯ ಮತ್ತು ನನ್ನ ತಾಯಿಯ ಹೆಸರು ನಮೂದಾಗಿವೆ ಎಂದು ಹೇಳಿದ್ದರಿಂದ ಪಹಣಿಯನ್ನು ನಿಪಿ**18** ಎಂದು ಗುರುತಿಸಿತು. ನಿಪಿ18 ರಲ್ಲಿ ವಿಸ್ತೀರ್ಣ ಎಷ್ಟು ನಮೂದು ಮಾಡಿದ್ದಾರೆ? ಎಂದರೆ 3 ಎಕರೆ 46 ಸೆಂಟ್ಸ್ ಎಂದು ನಮೂದು ಮಾಡಿದ್ದಾರೆ. ಇದರಲ್ಲಿ ನನ್ನ ತಂದೆಯ ಹಿಸ್ಸೆ 1 ಎಕರೆ 15 ಸೆಂಟ್ಸ್ ಇರುತ್ತದೆ ಎಂದರೆ ಸರಿ. ನನ್ನ ತಂದೆಗೆ ಇರುವ ಸದರಿ 1 ಎಕರೆ 15 ಸೆಂಟ್ಸ್ ವಿಸ್ತೀರ್ಣದಲ್ಲಿ ನನ್ನ ಅಣ್ಣ ಮೃತ ವೀರೇಶನ ಹಿಸ್ಸೆ ಕೋರಿ ವಾದಿಗಳು ಈ ದಾವೆ ಹಾಕಿದ್ದಾರೆ ಎಂದರೆ ಸರಿ. ಸಾಕ್ಷಿಗೆ ದಾವಾ ಐಟಂ ನಂ. 7 ರ ಅಸಸ್‌ಮೆಂಟ್ ರಿಜಿಸ್ಟರ್ ಕೊಟ್ಟು ಇದು ಯಾರ ಹೆಸರಿನಲ್ಲಿ ನಮೂದಾಗಿದೆ? ಎಂದು ಕೇಳಿದ್ದು, ಸಾಕ್ಷಿಯು ದಾಖಲೆಯನ್ನು ನೋಡಿ ನನ್ನ ತಂದೆ ಎಂ.ಪಿ.ಎಂ. ಚಂದ್ರಯ್ಯನ ಹೆಸರಿನಲ್ಲಿ ನಮೂದಾಗಿದೆ ಎಂದಿದ್ದರಿಂದ ಅದನ್ನು ನಿಪಿ**19** ಎಂದು ಗುರುತಿಸಿತು. ದಾವಾ ಐಟಂ ನಂ. 5 ರ ಹಳೆಯ ಡಿಸಿಬಿ ಎಕ್ಸ್ಟ್ರಾಕ್ಟ್ ತೋರಿಸಿ ಇದು ಯಾರ ಹೆಸರಿನಲ್ಲಿ ನಮೂದಾಗಿದೆ? ಎಂದು ಕೇಳಿದರೆ ನನ್ನ ತಾಯಿ 1 ನೇ ಪ್ರತಿವಾದಿಯ ಹೆಸರಿನಲ್ಲಿ ನಮೂದಾಗಿದೆ ಎಂದಿದ್ದರಿಂದ ಅದನ್ನು ನಿಪಿ**20** ಎಂದು ಗುರುತಿಸಿತು. ಐಟಂ ನಂ. 5 ರ ಖಾತೆಯು ನನ್ನ ತಂದೆ ಮೃತಪಟ್ಟ ನಂತರ ನನ್ನ ತಾಯಿಯ ಹೆಸರಿಗೆ ಖಾತೆ ಬದಲಾವಣೆಯಾಗಿತ್ತು ಎಂದರೆ ಸರಿಯಲ್ಲ. ನನ್ನ ತಾಯಿಯ ತಂದೆಯ ಹೆಸರು

ಎಚ್.ಎಂ. ಅಜ್ಜಯ್ಯನವರು. ಐಟಂ ನಂ. 5ರ ಖಾತೆ ಬದಲಾವಣೆ ಎಚ್.ಎಂ. ಅಜ್ಜಯ್ಯನವರಿಂದ ನನ್ನ ತಾಯಿಯ ಹೆಸರಿಗೆ ಆಗಿತ್ತು ಎಂದು ದಾಖಲೆ ಹಾಜರು ಮಾಡಿದ್ದೀನಾ? ಎಂದರೆ ಅಂತಹ ದಾಖಲೆಗಳು ಸಿಕ್ಕಲಿಲ್ಲ. ದಾವಾ ಐಟಂ ನಂ. 1 ರಿಂದ 7ನೇ ಆಸ್ತಿಗಳ ಹಕ್ಕು ಬದಲಾವಣೆಯು ನನ್ನ ತಂದೆ ತೀರಿಕೊಂಡ ನಂತರ ನನ್ನ ತಾಯಿ ಒಬ್ಬರ ಹೆಸರಿಗೆ ಮಾತ್ರ ದಾಖಲಾಗಿದ್ದವು ಎಂದರೆ ಸಾಕ್ಷಿಯು ಮನೆಗಳ ಖಾತೆ ನನ್ನ ತಾಯಿಯ ಹೆಸರಿನಲ್ಲೇ ಇದ್ದವು ಎಂದು ಹೇಳಿದ್ದಾರೆ. ನಾನು ಮನೆಗಳ ಖಾತೆ ನನ್ನ ತಾಯಿಯ ಹೆಸರಿನಲ್ಲೇ ನಮೂದಾಗಿದ್ದವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಅಣ್ಣ ಮೃತ ಪಟ್ಟು 10 ವರ್ಷಗಳು ಆಗಿರಬಹುದು. ಆತ ಮೃತಪಟ್ಟಾಗ ಆತನಿಗೆ ಸುಮಾರು 45 ವರ್ಷ ಇದ್ದಿರಬಹುದು. ನನ್ನ ಅಣ್ಣ ವೀರೇಶನಿಗೆ ಕುಡಿತದ ಚಟ ಮತ್ತು ಇಸ್ಪೀಟ್ ಆಡುವ ಚಟ ಇದ್ದವು ಎಂದರೆ ಮೊದಲು ಇರಲಿಲ್ಲ, ಇತ್ತೀಚೆಗೆ ಅಂದರೆ ಆತನ ಹೆಂಡತಿ ಮಕ್ಕಳು ಬಿಟ್ಟು ಹೋದ ನಂತರ ಆ ಚಟಗಳನ್ನು ಅಂಟಿಸಿಕೊಂಡಿದ್ದ. ಆತನಿಗೆ ಇದ್ದ ಚಟಗಳ ಕಾರಣದಿಂದಲೇ ನನ್ನ ಅಣ್ಣ 45 ವರ್ಷಕ್ಕೇ ತೀರಿಕೊಂಡ ಎಂದರೆ ನನ್ನ ಅಣ್ಣನಿಗೆ ಟಿ.ಬಿ ಮತ್ತು ಎಚ್.ಐ.ವಿ ಇತ್ತು, ಅದು ಗೊತ್ತಾಗಿ ವಾದಿಗಳು ಆತನನ್ನು ಬಿಟ್ಟು ಹೋದರು, ಅದಾದ ನಂತರ ನನ್ನ ಅಣ್ಣ ತೀರಿಕೊಂಡ.

03. ನನ್ನ ಅಣ್ಣನಿಗೆ ಎಚ್.ಐ.ವಿ ಮತ್ತು ಟಿ.ಬಿ ಆಗಿದ್ದ ಬಗ್ಗೆ ಎಲ್ಲಾ ದಾಖಲೆಗಳನ್ನು ಹಾಜರು ಮಾಡಿದ್ದೇನೆ. ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದ ಪತ್ರ ಮತ್ತು ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ನನ್ನ ಅಣ್ಣನಿಗೆ ಎಚ್.ಐ.ವಿ ಮತ್ತು ಟಿ.ಬಿ ಕಾಯಿಲೆಗಳು ಇದ್ದವೆಂದು ಬರೆಯಿಸಿದ್ದೀನಾ? ಎಂದರೆ ಬರೆಯಿಸಿಲ್ಲ. ನನ್ನ ಅಣ್ಣನಿಗೆ ದುಶ್ಚಟಗಳು ಇದ್ದು ಆತ ಹೆಂಡತಿ ಮಕ್ಕಳನ್ನು ಸರಿಯಾಗಿ ಪೋಷಣೆ ಮಾಡದೇ ಇದ್ದಿದ್ದರಿಂದ ಅವರು 1ನೇ ವಾದಿಯ ತವರು ಮನೆಗೆ ಹೋಗಿ ನೆಲೆಸಿದರು ಎಂದರೆ ಸರಿ. 2 ರಿಂದ 4ನೇ ವಾದಿಗಳ ಪೋಷಣೆಯನ್ನು 1ನೇ ವಾದಿಯೇ ಮಾಡಿದ್ದಾರೆ ಎಂದರೆ ಸರಿ. ನನ್ನ ಅಣ್ಣನ ದುಶ್ಚಟಗಳ ಕಾರಣದಿಂದ ನನ್ನ ತಂದೆ ತೀರಿಕೊಂಡ ನಂತರ ನನ್ನ ಅಣ್ಣ ಆಸ್ತಿಗಳನ್ನು ಮಾರಿ ಹಾಕುತ್ತಾನೆ ಎಂಬ ಭಯದಿಂದ ನನ್ನ ತಾಯಿ ಕೇವಲ ಆಕೆಯ ಹೆಸರಿಗೆ ಮಾತ್ರ ಖಾತೆ ಮಾಡಿಸಿಕೊಂಡಿದ್ದಳು ಎಂದರೆ ಸರಿಯಲ್ಲ. ವಾದಿಗಳಿಗೆ ದಾವಾ ಸ್ವತ್ತುಗಳಲ್ಲಿ ನನ್ನ ಅಣ್ಣ ವೀರೇಶನ ಹಿಸ್ಸೆಯ ಹಕ್ಕು ಇರುತ್ತದೆಯೇ? ಅಥವಾ ಇರುವುದಿಲ್ಲವೇ? ಎಂದರೆ ಇರುತ್ತದೆ. ನನ್ನ ತಂದೆ ಇದ್ದಾಗ ನಮಗೆ ಮತ್ತು ನನ್ನ ಅಣ್ಣ ವೀರೇಶನ ನಡುವೆ ಪಾಲುವಿಭಾಗ ನಡೆದಿರಲಿಲ್ಲ. ನಮ್ಮ ತಂದೆ ತೀರಿಕೊಂಡ ನಂತರ ನನ್ನ ತಾಯಿ ಮತ್ತು ನನ್ನ ಅಣ್ಣನ ನಡುವೆ ವಿಭಾಗ ನಡೆದಿತ್ತು. ಆ ವಿಭಾಗ ಯಾವ ದಿನಾಂಕದಂದು ಆಗಿತ್ತು ಮತ್ತು ವಿಭಾಗದಲ್ಲಿ ಯಾರು ಯಾರಿಗೆ ಯಾವ ಯಾವ ಆಸ್ತಿಗಳು ಬಂದಿದ್ದವು? ಎಂದರೆ ಪಾಲುವಿಭಾಗದ ದಿನಾಂಕ ಗೊತ್ತಿಲ್ಲ. ಆದರೆ ಸದರಿ ವಿಭಾಗದಲ್ಲಿ ಸರ್ವೇ ನಂ.289 ನ್ನು 2ನೇ ಪ್ರತಿವಾದಿಗೆ ಮತ್ತು ಸರ್ವೇ ನಂ. 254ನ್ನು ನನ್ನ ಹಿಸ್ಸೆಗೆ ಕೊಟ್ಟಿದ್ದರು. ಸದರಿ ವಿಭಾಗದಲ್ಲಿ ನನ್ನ ಅಣ್ಣ ವೀರೇಶನಿಗೆ ಯಾವ ಆಸ್ತಿ ಬಂದಿತ್ತು? ಎಂದರೆ ಸಾಕ್ಷಿಯು ಸರ್ವೇ ನಂ. 289 ಮತ್ತು 254 ಬಂದಿದ್ದವು, ಅವುಗಳನ್ನು ನನ್ನ ಅಣ್ಣ ಮತ್ತು ನನ್ನ ತಾಯಿ ಇಬ್ಬರೂ ಸೇರಿ ಮಾರಾಟ ಮಾಡಿದ್ದರು ಎಂದು ಹೇಳಿದ್ದಾರೆ. ಪ್ರತಿವಾದ ಪತ್ರ ಮತ್ತು ಸಾಕ್ಷಿ ಪ್ರಮಾಣ ಪತ್ರದಲ್ಲಿ ನನ್ನ ಅಣ್ಣ, ನನ್ನ ತಾಯಿ ಮತ್ತು ನಮ್ಮ ನಡುವೆ ಪಾಲುವಿಭಾಗವಾಗಿತ್ತು ಹಾಗೂ ನನ್ನ ಅಣ್ಣ ಮತ್ತು ತಾಯಿ ಸೇರಿ ಜಮೀನುಗಳನ್ನು ಮಾರಾಟ ಮಾಡಿದ್ದರು ಎಂಬ ಬಗ್ಗೆ ಬರೆಯಿಸಿದ್ದೀನಾ? ಎಂದರೆ ಬರೆಯಿಸಿದ್ದೇನೆ. ನಾನು ಆ ರೀತಿ ಬರೆಯಿಸದೇ ಇದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

04. ಐಟಂ ನಂ. 1 ಮತ್ತು 2ರ ಖಾತೆ ನಮ್ಮ ತಾಯಿಯ ಹೆಸರಿನಲ್ಲಿ ಇದ್ದಿದ್ದರಿಂದ ನಾವು ಮತ್ತು ನಮ್ಮ ತಾಯಿ ಕ್ರಯ ಪತ್ರಗಳನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ ದಿನಾಂಕ 04.12.2015ರ ಕ್ರಯ ಪತ್ರಗಳಿಗೆ ವಾದಿಗಳು ಯಾರೂ ಸಮ್ಮತಿ ನೀಡಿ ಸಹಿಗಳನ್ನು ಮಾಡಿಲ್ಲ ಎಂದರೆ ವಾದಿಗಳು ನಮ್ಮ ಅಣ್ಣನ ಜೊತೆ ಇರಲಿಲ್ಲವಾದ್ದರಿಂದ ನನ್ನ ಅಣ್ಣ ಮತ್ತು ನನ್ನ ತಾಯಿ

ಮಾತ್ರ ಕ್ರಯ ಪತ್ರಗಳನ್ನು ಬರೆದುಕೊಟ್ಟಿದ್ದಾರೆ. ನನ್ನ ಅಣ್ಣ ವೀರೇಶ ಯಾವುದೇ ಕ್ರಯ ಪತ್ರಗಳನ್ನು ಬರೆದು ಕೊಡದೇ ಇದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಮತ್ತು ನನ್ನ ಅಕ್ಕ 2 ನೇ ಪ್ರತಿವಾದಿಗೆ ಒಂದೇ ದಿನ ಕ್ರಯ ಪತ್ರಗಳು ನೋಂದಣಿಯಾಗಿವೆ ಎಂದರೆ ಸರಿ. ಆ ಕ್ರಯ ಪತ್ರಗಳಿಗೆ ಸಾಕ್ಷಿ ಸಹಿ ಮಾಡಿರುವ ವ್ಯಕ್ತಿಗಳು ಇಬ್ಬರೂ ನನ್ನ ಗಂಡನ ಊರಿನವರು ಎಂದರೆ ಸರಿ . ಕ್ರಯ ಪತ್ರದ ಒಬ್ಬ ಸಾಕ್ಷಿ ಸೋಮಶೇಖರಯ್ಯ ನನಗೆ ಸಂಬಂಧಿಕರು ಎಂದರೆ ಸರಿ . ನನ್ನ ಅಣ್ಣ ಮದ್ಯದ ಅಮಲಿನಲ್ಲಿ ಇರುವಾಗ ಆತನನ್ನು ಕರೆದುಕೊಂಡು ಹೋಗಿ ಕ್ರಯ ಪತ್ರಗಳಿಗೆ ಸಹಿ ಮಾಡಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ ಐಟಂ ನಂ. 1 ಮತ್ತು 2 ನ್ನು ನನಗೆ ಮತ್ತು 2 ನೇ ಪ್ರತಿವಾದಿಗೆ ಮಾರಾಟ ಮಾಡುವ ಹಕ್ಕು ನನ್ನ ತಾಯಿಗೆ ಇರಲಿಲ್ಲ ಎಂದರೆ ಸರಿಯಲ್ಲ. ಕ್ರಯ ಪತ್ರಗಳಲ್ಲಿ ನಮೂದು ಮಾಡಿದ ಕ್ರಯದ ಮೊತ್ತವನ್ನು ನಮ್ಮ ತಾಯಿಗೆ ಯಾವ ಬ್ಯಾಂಕಿನ ಮೂಲಕ ಪಾವತಿ ಮಾಡಿದ್ದೇವೆ? ಎಂದರೆ ನನ್ನ ತಾಯಿಗೆ ಕ್ಯಾನ್ಸರ್ ಇದ್ದಿದ್ದಕ್ಕೆ ಚಿಕಿತ್ಸೆ ಕೊಡಿಸಿದ ಖರ್ಚು ಸೇರಿಸಿ ನಾವು ಕ್ರಯದ ಮೊತ್ತವನ್ನು ನಗದಾಗಿ ನಮ್ಮ ತಾಯಿಗೆ ಸಂದಾಯ ಮಾಡಿದ್ದೆವು. ಯಾವುದೇ ಕ್ರಯದ ಮೊತ್ತ ಪಾವತಿ ಮಾಡದೇ ವಾದಿಗಳ ಹಿಸ್ಸೆ ಹೊಡೆದುಕೊಳ್ಳಲು ನಾವು ಮತ್ತು ನಮ್ಮ ತಾಯಿ ಸೇರಿ ಕ್ರಯ ಪತ್ರಗಳನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಈ ದಾವೆಯನ್ನು ಮೊದಲಿಗೆ ಸಿವಿಲ್ ಜಡ್ಜ್ ನ್ಯಾಯಾಲಯದಲ್ಲಿ ಸಲ್ಲಿಸಿದಾಗ ನನ್ನ ತಾಯಿ ಇನ್ನೂ ಬದುಕಿದ್ದರು ಎಂದರೆ ಸರಿ. ಆ ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿರುವಾಗ ನಾವು ಮತ್ತು ನಮ್ಮ ತಾಯಿ ಪ್ರತಿವಾದ ಪತ್ರಗಳನ್ನು ಸಲ್ಲಿಸಿರಲಿಲ್ಲ ಎಂದರೆ ಸರಿ. ನಮ್ಮ ತಾಯಿಗೆ ಐಟಂ ನಂ. 3 ರಿಂದ 5ರ ದಾನ ಪತ್ರಗಳನ್ನು ಬರೆದುಕೊಡಲು ಯಾವುದೇ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಅಕ್ಕ ದಾನ ಪತ್ರಗಳ ಆಧಾರದ ಮೇಲೆ ಮನೆಗಳ ಹಕ್ಕು ಬದಲಾವಣೆ ಮಾಡಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ . ಐಟಂ ನಂ. 7ರ ದಾನ ಪತ್ರವನ್ನು ನನಗೆ ಬರೆದುಕೊಡಲು ನನ್ನ ತಾಯಿಗೆ ಯಾವುದೇ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ಕ್ರಯ ಪತ್ರಗಳು ಮತ್ತು ದಾನ ಪತ್ರಗಳನ್ನು ಮಾಡಿಕೊಟ್ಟ ಬಗ್ಗೆ ವಾದಿಗಳಿಗೆ ಯಾವುದೇ ಮಾಹಿತಿ ಇರಲಿಲ್ಲ ಎಂದರೆ ಸರಿಯಲ್ಲ. ದಾವಾ ವಿಚಾರಣೆ ನಡೆಯುತ್ತಿರುವಾಗಲೇ ವಾದಿಗಳ ಹಿಸ್ಸೆ ಕಬಳಿಸಲು ನಾನು ಮತ್ತು ಉಳಿದ ಪ್ರತಿವಾದಿಗಳು ಸೇರಿ ವಿಲ್ ದಾಖಲೆಯನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ.

05. ನನ್ನ ತಾಯಿಗೆ ಮೊದಲು ಸಕ್ಕರೆ ಕಾಯಿಲೆ ಮತ್ತು ಬಿ.ಪಿ. ಇತ್ತು ಎಂದರೆ ಸರಿ. ನಿಡಿ1 ರಿಂದ ನಿಡಿ4 ದಾಖಲೆಗಳು ನನ್ನ ತಾಯಿಯು ದಾವಣಗೆರೆಯಲ್ಲಿ ಸಕ್ಕರೆ ಕಾಯಿಲೆಗೆ ಚಿಕಿತ್ಸೆ ಪಡೆದುಕೊಂಡ ದಾಖಲೆಗಳು ಎಂದರೆ ಸರಿ. ನನ್ನ ತಾಯಿಗೆ ಕ್ಯಾನ್ಸರ್ ಇದೆ ಎಂದು ಯಾವಾಗ ಗೊತ್ತಾಯಿತು? ಎಂದರೆ 2007-08 ನೇ ಇಸವಿಯಲ್ಲಿ ಗೊತ್ತಾಯಿತು. ನನ್ನ ತಾಯಿಗೆ ಕ್ಯಾನ್ಸರ್ ಇರುವ ವಿಚಾರ ಬೆಂಗಳೂರಿನ ಎಚ್.ಜಿ. ಆಸ್ಪತ್ರೆಗೆ ಹೋದಾಗಲೇ ಗೊತ್ತಾಯಿತು ಎಂದರೆ ಸರಿಯಲ್ಲ. ಮಂಗಳೂರಿನ ಆಸ್ಪತ್ರೆಗೆ 2006-07 ನೇ ಇಸವಿಯಲ್ಲಿ ಹೋಗಿದ್ದೆವು. 2006-07 ರಲ್ಲಿ ನನ್ನ ತಾಯಿಗೆ ಕ್ಯಾನ್ಸರ್ ಇರುವ ವಿಚಾರ ಗೊತ್ತಾಯಿತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾಯಿಗೆ ಕ್ಯಾನ್ಸರ್ ಇರುವುದು ಬೆಂಗಳೂರಿನ ಎಚ್.ಜಿ. ಆಸ್ಪತ್ರೆಗೆ ಹೋದ ನಂತರವೇ ಗೊತ್ತಾಯಿತು ಎಂದು ನಾನೇ ದಾಖಲೆಗಳನ್ನು ಹಾಜರು ಮಾಡಿದ್ದೇನೆ ಎಂದರೆ ಸುಳ್ಳು. ನಾನು ಹಾಜರು ಮಾಡಿದ ದಾಖಲೆಗಳ ಪ್ರಕಾರ ನನ್ನ ತಾಯಿಯ ಚಿಕಿತ್ಸೆಗೆ ಅಂದಾಜು ರೂ. 1 ಲಕ್ಷ ಖರ್ಚಾಗಿದೆ ಎಂದರೆ ಸುಳ್ಳು. ದಾವಾ ಸ್ವತ್ತುಗಳಲ್ಲಿ ಬಂದ ಆದಾಯದ ಹಣದಿಂದ ನನ್ನ ತಾಯಿಗೆ ಚಿಕಿತ್ಸೆ ಕೊಡಿಸಲಾಗಿತ್ತು ಎಂದರೆ ಸುಳ್ಳು. 2015ರಲ್ಲಿ ನನ್ನ ತಾಯಿಯ ಕ್ಯಾನ್ಸರ್ ಚಿಕಿತ್ಸೆಗಾಗಿ ದಾವಾ ಐಟಂ ನಂ. 1 ಮತ್ತು 2 ನ್ನು ಮಾರಾಟ ಮಾಡಲಾಗಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2015 ನೇ ಇಸವಿಯಲ್ಲಿ ನನ್ನ ತಾಯಿಗೆ ಯಾವುದೇ ಕ್ಯಾನ್ಸರ್ ಕಾಯಿಲೆ ಇರಲಿಲ್ಲ ಎಂದರೆ ಸಾಕ್ಷಿಯು ಒಂದು ಆಸ್ತಿ ನನ್ನ ಅಣ್ಣನ ಚಿಕಿತ್ಸೆಗೋಸ್ಕರ ಮಾರಾಟ ಮಾಡಿದ್ದರು, ಇನ್ನೊಂದನ್ನು ನನ್ನ ತಾಯಿಯ ಚಿಕಿತ್ಸೆಗೋಸ್ಕರ

ಮಾರಾಟ ಮಾಡಿದ್ದರು ಎಂದು ಹೇಳಿದ್ದಾರೆ. ಒಂದು ಆಸ್ತಿಯನ್ನು ಅಣ್ಣನ ಚಿಕಿತ್ಸೆಗಾಗಿ ಮಾರಾಟ ಮಾಡಿರುವುದಾಗಿ ಪ್ರತಿವಾದ ಪತ್ರ ಮತ್ತು ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆಯಿಸಿಲ್ಲ ಎಂದರೆ ಸರಿಯಲ್ಲ.

06. ಪ್ರತಿವಾದ ಪತ್ರ ಮತ್ತು ಸಾಕ್ಷಿ ಪ್ರಮಾಣ ಪತ್ರದಲ್ಲಿ 1 ನೇ ವಾದಿ 2010 ರಲ್ಲಿ ಮನೆ ಬಿಟ್ಟು ಹೋಗುವಾಗ ಹೋಟೆಲ್ ಸರಂಜಾಮುಗಳು, ಚಿನ್ನ ಮತ್ತು ಬೆಳ್ಳಿಯ ವಸ್ತುಗಳನ್ನು ತೆಗೆದುಕೊಂಡು ಹೋಗಿದ್ದರು ಎಂದು ಹೇಳಿದ್ದು, ಆಕೆಯ ವಿರುದ್ಧ ಪೊಲೀಸರಿಗೆ ದೂರು ಕೊಟ್ಟಿದ್ದೀರಾ? ಎಂದರೆ ಮನೆಯವರೇ ಆಗಿರುವುದರಿಂದ ದೂರು ಕೊಡದೇ ಸುಮ್ಮನಾದೆವು. ವಾದಿಗಳಿಗೆ ಹಿಸ್ಸೆ ಕೊಡಬಾರದು ಎಂಬ ಉದ್ದೇಶದಿಂದ ನಮ್ಮ ತಾಯಿ ಮತ್ತು ನಾವು ಶಾಮೀಲಾಗಿ ದಾಖಲೆಗಳನ್ನು ಸೃಷ್ಟಿ ಮಾಡಿ ಸುಳ್ಳು ತಕರಾರು ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ನಮ್ಮ ತಾಯಿ ಇರುವಾಗ ವಾದಿಗಳು ಸಾಕಷ್ಟು ಬಾರಿ ಪಾಲುವಿಭಾಗ ಕೇಳಿದರೂ ಕೊಡದೇ ಇದ್ದಿದ್ದರಿಂದ ವಾದಿಗಳು ದಾವೆ ಹಾಕಿದ್ದಾರೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ).

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಹೂವಿನ ಹಡಗಲಿ.